ಅಮೆರಿಕದ ಜನತೆ ಪರಿಸರ ಸಂರಕ್ಷಣೆಯ ಬಗ್ಗೆ ತೆಗೆದುಕೊಳ್ಳುವ ಕಾಳಜಿ, ಕಟ್ಟುನಿಟ್ಟಿನ ಶಿಸ್ತು ಕ್ರಮಗಳು ಅನನ್ಯ. ಮೂರು ದಿನಗಳ ಪರ್ವತಾರೋಹಣದ ಸಂದರ್ಭದಲ್ಲಿ ಮಾನವ ಶರೀರದ ತ್ಯಾಜ್ಯವನ್ನು ನಮಗೆ ನೀಡಲಾಗಿದ್ದ ವಿಶೇಷ ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್‌ನಲ್ಲಿ ಸಂಗ್ರಹಿಸಿಟ್ಟುಕೊಂಡು ನಮ್ಮ ಬ್ಯಾಕ್ ಪ್ಯಾಕ್‌ನಲ್ಲೇ ಹೊತ್ತು ತಂದು ಬೇಸ್ ಕ್ಯಾಂಪ್‌ನಲ್ಲಿ ಇಟ್ಟಿರುವ ವಿಶೇಷ ಬಾಕ್ಸ್‌ಗಳಲ್ಲಿ ಹಾಕಬೇಕಾಗಿತ್ತು. ಇದನ್ನು ‘ಲೀವ್ ನೊ ಟ್ರೇಸ್ ಪಾಲಿಸಿ’ ಎಂದು ಎಲ್ಲರೂ ಪಾಲಿಸಲೇಬೇಕು. ಪರ್ವತಾರೋಹಿಗಳು ಮೂತ್ರ ವಿಸರ್ಜನೆಗಾಗಿ ಪ್ರತ್ಯೇಕ ಜಾಗಗಳಲ್ಲಿ ಐಸ್‌ನಲ್ಲಿ ಗುಂಡಿ ತೋಡಿದ್ದು ಆ ಜಾಗವನ್ನೇ ಉಪಯೋಗಿಸಬೇಕಾಗಿತ್ತು. ಪರ್ವತಾರೋಹಿಗಳು ಐಸ್ ಕರಗಿಸಿ ಕುಡಿಯುವುದರಿಂದ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಈ ಕ್ರಮ ಪಾಲಿಸಬೇಕಾಗಿತ್ತು. ನೀರಿನ ಬಾಟಲ್‌ಗಳು, ಪ್ಲಾಸ್ಟಿಕ್ ಕವರ್‌ಗಳಿಂದ ತುಂಬಿರುವ ಹಿಮಾಲಯ ಪರ್ವತದಲ್ಲೂ ಇದನ್ನು ಪಾಲಿಸಬಾರದೇ?



ಟೆಂಟ್‌ಗಳು



ಪರ್ವತಾರೋಹಿಗಳ ತಂಡ